ದೃಷ್ಟಿಯಲ್ಲಿರಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮುಖ್ಯಮಂತ್ರಿಯವರಿಗೆ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರಿಗೂ ತಂತಿ ಕಳುಹಿಸಿದ್ದು ತನ್ನ ಮಂಡಲ ಪಂಚಾಯಿತಿ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದಾರೆ ಆದ್ದರಿಂದ ಈ ಕೂಡಲೇ ಆಕೆಗಾಗಿರುವ ಅನ್ಯಾಯವನ್ನು ಸರಿಪಡಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯ ಪಡಿಸುತ್ತೇವೆ. ತಾ. ೨೮-೨-೮೭ನೇ ಉದಯವಾಣಿ ಪತ್ರಿಕೆಯಲ್ಲಿ ಈ ವಿಚಾರ ಪ್ರಕಟವಾಗಿದೆ.

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಎರಡು ಅಭಿಪ್ರಾಯಗಳಿವೆ. ಆದ್ದರಿಂದ ಆ ಜಾಗ ಅವರದ್ದೋ ಇವರದ್ದೋ ಎಂಬುದನ್ನು ರೆವಿನ್ಯೂ ಇಲಾಖೆಯಿಂದ ತನಿಖೆ ನಡೆಸಿಸಿ ಅವರಿಗೆ ಏನು ಪ್ರೊಟೆಕ್ಷನ್ ಕೊಡಬೇಕೋ ಅದನ್ನು ಕೊಡುತ್ತೇನೆ.

೬. ಚಿಂಚೋಳಿ ತಾಲ್ಲೂಕು ಕೇಂದ್ರ ಸ್ಥಾನದಲ್ಲಿರುವ ೨೫೫ ಹಾಸಿಗೆಗಳ ಸರಕಾರಿಆಸ್ಪತ್ರೆಯು ಕಟ್ಟಡ ಕುಸಿಯುವ ಸ್ಥಿತಿಯಲ್ಲಿರುವುದು

ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).— ಮಾನ್ಯ ಅಧ್ಯಕ್ಷರೇ ಚಿಂಚೋಳಿ ತಾಲ್ಲೂಕು ಕೇಂದ್ರ ಸ್ಥಾನದಲ್ಲಿರುವ ೨೫೫ ಹಾಸಿಗೆಗಳ ಸರಕಾರ ಆಸ್ಪತ್ರೆಯ ಅರ್ಧದಷ್ಟು ಭಾಗ ಕಟ್ಟಡ ಕುಸಿದ ಸ್ಥಿತಿಯಲ್ಲಿದ್ದು ಒಳರೋಗಿಗಳನ್ನು ಪ್ರವೇಶ ಕೊಡುವುದನ್ನು ನಿಲ್ಲಿಸಿದ್ದು ಬಗ್ಗೆ ಕಳೆದ ವರ್ಷ ಸೆಪ್ಟೆಂಬರ್ ನಲ್ಲಿ ಮಾನ್ಯ ಆರೋಗ್ಯ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿತ್ತು. ಸಚಿವದ್ವಯರು ಕೂಡಲೇ ಹೊಸ ಕಟ್ಟಡ ಸಲುವಾಗಿ ಸಂಬಂಧಿ ಅಭಿಯಂತರರಿಗೆ ಸೂಚಿಸಿರುವುದಾಗಿ ತಿಳಿಸಿದ್ದರು ಆದರೆ ಈ ದಿಸೆಯಲ್ಲಿ ಇಲ್ಲಿಯವರೆಗೆ ಯಾವುದೇ ಪ್ರಗತಿಯಾಗಿಲ್ಲ. ಅತಿ ಮುಖ್ಯ ಸೇವೆಯಾದ ಆರೋಗ್ಯ ಸೌಲಭ್ಯವನ್ನೇ ಪಡೆಯುವುದರಲ್ಲಿ ತಾಲ್ಲೂಕಿನ ಜನರು ಪಂಚಿರಾಗುತ್ತಿದ್ದಾರೆ. ಸಮಸ್ಯೆಯ ಪ್ರಾಮುಖ್ಯತೆಯನ್ನರಿತು ಕನಿಷ್ಟ ಈಗಲಾದರೂ ಕೂಡಲೇ ಕಟ್ಟಡದ ಕೆಲಸವನ್ನು ಕೈಗೆತ್ತಿಕೊಳ್ಳಲು ಸಂಬಂಧಿತರಿಗೆ ಆದೇಶ ನೀಡುವರೇ? ಇಲ್ಲವೇ ಕಟ್ಟಡ ಪೂರ್ತಿಯಾಗಿ ನೆಲಸಮವಾಗುವುದನ್ನು ಕಾಯುವರೇ? ತಾಲ್ಲೂಕಿನ ಜನರಿಗೆ ಆರೋಗ್ಯ ಸೌಲಭ್ಯ ಶಾಶ್ವತವಾಗಿ ನಿರಾಕರಿಸುವರೇ ಎಂಬ ಬಗ್ಗೆ ತಿಳಿಸಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ,

ಶ್ರೀ ಹೆಚ್.ಟಿ ಕೃಷ್ಣಪ್ಪ.— ಅಧ್ಯಕ್ಷರೇ, ಈ ಬಗ್ಗೆ ಅಂದಾಜು ಮತ್ತು ನಕ್ಷೆಗಳನ್ನು ಕಳಿಸಿಕೊಡಬೇಕೆಂದು ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರಿಗೆ ತಿಳಿಸಿದ್ದೇನೆ. ಅದು ಬಂದ ತಕ್ಷಣ ಕೆಲಸ ತೆಗೆದುಕೊಳ್ಳುತ್ತೇವೆ.

೭. ಶಾಸಕರನ್ನು ಮತ್ತು ಜಿಲ್ಲಾ ಪರಿಷತ್ ಸದಸ್ಯರನ್ನು ಭೂ ನ್ಯಾಯ ಮಂಡಳಿಗೆ ನಾಮಕರಣ ಮಾಡುವುದು

ಶ್ರೀ ವಿಜಯ ಕುಮಾರ್ ಸೊರಕೆ (ಪುತ್ತೂರು).— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಭೂಸುಧಾರಣೆ ಕಾನೂನು ಬಂದು ಕ್ರಾಂತಿಕಾರಕ ಬದಲಾವಣೆ. ಈವಾಗಲೇ ಗೇಣಿದಾರರನ್ನು ಗುರುತಿಸಿ ಅವರನ್ನು ಭೂಸುಧಾರಣೆ ಕಾನೂನಿನ ಪ್ರಕಾರ ಗೇಣಿದಾರರೆಂದು ನೋಂದಾಯಿಸಲಾಗಿದೆ. ಕೆಲವು ಪ್ರಕರಣಗಳಲ್ಲಿ ಭೂಮಾಲೀಕರು ಕೈಕೋರ್ಟಿಗೆ ಹೋಗಿ ಪುನಃ ಭೂ ನ್ಯಾಯ ಮಂಡಳಿಗೆ ತನಿಖೆಗೆ ಬರುವಂತಹ ಅವಕಾಶವಾಗಿದೆ. ಭೂನ್ಯಾಯ ಮಂಡಲಿಗಳಲ್ಲಿ ಸ್ಥಳೀಯ ಶಾಸಕರು ಇನ್ನು ಮೂರು ಮಂದಿ ಇನ್ನಿತರ ಸದಸ್ಯರು ಕೆಲಸ ಮಾಡುವ ಅವಕಾಶ ಸ್ಥಳೀಯ ಶಾಸಕರೂ ಜನರ ಪ್ರತಿನಿಧಿಯಾಗಿರುತ್ತಾನೆ. ಕೆಲವಾರು ಸಂದರ್ಭದಲ್ಲಿ ಈಗ ನಡೆಯುವಂತಹ ಭೂನ್ಯಾಯ ಮಂಡಲಿಗಳಲ್ಲಿ ಗೇಣಿದಾರರಿಗೆ ವಿರೋಧವಾಗಿ ಹುಕುಂ ಆಗುವಂತಹ ಸಂದರ್ಭಗಳು ಕಂಡು ಬರುತ್ತವೆ. ಶಾಸಕರು ಹಾಗೂ ಉಳಿದ ಸದಸ್ಯರು ಕೂಡ ಜನರ ಪ್ರತಿನಿಧಿಗಳನ್ನೇ ತಾವು ಭೂನ್ಯಾಯ ಮಂಡಲಿಯ ಸದಸ್ಯರಾಗಿ ನೇಮಕ ಮಾಡಿದ್ದರೆ ವಾಸ್ತವ ವಿಚಾರದ ಬಗ್ಗೆ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂತಹ ಅವಕಾಶವಾಗುತ್ತದೆ. ಆದುದರಿಂದ ಶಾಸಕರು ಮತ್ತು ಜಿಲ್ಲಾ ಪರಿಷತ್ತು ಸದಸ್ಯರನ್ನು ಈ ಭೂನ್ಯಾಯ ಮಂಡಲಿಯ ಸದಸ್ಯರನ್ನಾಗಿ ಮಾಡಬೇಕಾಗಿ ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.